**ಸಮಗ್ರ ಶಿಕ್ಷಣ ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡಗಳ ಪೂರಕ ಕಟ್ಟಡ ನೃಪತುಂಗ ರಸ್ತೆ, ಬೆಂಗಳೂರು-560001**

**ಸಂಖ್ಯೆ:** ಎಸ್.ಎಸ್.ಕೆ/ECCE /ಇತರೆ ಪತ್ರಗಳು/2025-26 ದಿನಾಂಕ:19.06.2026

**ಜ್ಞಾಪನ**

| | |
|---|---|
| ವಿಷಯ: | 2026-27 ನೇ ಸಾಲಿನ ECCE ಮಕ್ಕಳ ದಾಖಲಾತಿಯನ್ನು UDISE + ನಲ್ಲಿ ಇಂದೀಕರಿಸುವ ಬಗ್ಗೆ. |

***************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026-27 ನೇ ಸಾಲಿನಲ್ಲಿ ಪೂರ್ವಪ್ರಾಥಮಿಕ ತರಗತಿಗಳ ದಾಖಲಾತಿಗಳು ಆರಂಭವಾಗಿದೆ. ಈಗಾಗಲೇ ತಮ್ಮ ಜಿಲ್ಲೆಗಳಿಗೆ ಅನುಮೋದನೆಗೊಂಡ ಎಲ್ಲಾ ಪೂರ್ವ ಪ್ರಾಥಮಿಕ ತರಗತಿಗಳನ್ನು ಆರಂಭಿಸುವುದು. ಈ ಸಂಬಂಧ ಹೆಚ್ಚಿನ ಮಟ್ಟದಲ್ಲಿ ಪ್ರಚಾರ ಕಾರ್ಯವನ್ನು ಮತ್ತು ದಾಖಲಾತಿ ಆಂದೋಲನವನ್ನು ಕೈಗೊಂಡು, LKG ಮತ್ತು UKG ತರಗತಿಗಳಿಗೆ ಕನಿಷ್ಠ 20 ಮಕ್ಕಳು ಮತ್ತು ಗರಿಷ್ಠ 40 ಮಕ್ಕಳು ಇರುವಂತೆ, ದಾಖಲಿಸಿಕೊಂಡು ಮಕ್ಕಳ ದಾಖಲಾತಿಯನ್ನು UDISE+ ನಲ್ಲಿ ಕಡ್ಡಾಯವಾಗಿ ಇಂದೀಕರಿಸಲು ಸೂಚಿಸಿದೆ. UDISE + ಮಾಹಿತಿ ಆಧಾರದ ಮೇಲೆ ಶಿಕ್ಷಕರು ಮತ್ತು ಆಯಾಗಳ ಗೌರವಧನವನ್ನು ಬಿಡುಗಡೆ ಮಾಡಲಾಗುವುದು. ಪೂರ್ವಪ್ರಾಥಮಿಕ ತರಗತಿಗಳ ದಾಖಲಾತಿಗಳನ್ನು ನಿಗಧಿತ ಮಟ್ಟದಲ್ಲಿ ಸಾಧಿಸದಿದ್ದಲ್ಲಿ ಸಂಬಂಧಿಸಿದ ತಾಲ್ಲೂಕು ಮತ್ತು ಜಿಲ್ಲಾ ECCE ನೋಡಲ್ ಅಧಿಕಾರಿಗಳು, ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಉಪ ನಿರ್ದೇಶಕರು (ಆಡಳಿತ) ಇವರನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ.
ಬೆಂಗಳೂರು

**ಇವರಿಗೆ ಅಗತ್ಯ ಕ್ರಮಕ್ಕಾಗಿ**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಪದನಿಮಿತ್ತ ಜಿಲ್ಲಾಯೋಜನಾ ಸಮನ್ವಯಾಧಿಕಾರಿಗಳು ಹಾಗೂ ಜಿಲ್ಲಾ ECCE ನೋಡಲ್ ಅಧಿಕಾರಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರಿಗೆ ಮುಂದಿನ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾ.ಶಿ.ಇ ಸಂಬಂಧಿಸಿದ ತಾಲ್ಲೂಕು ECCE ನೋಡಲ್ ಅಧಿಕಾರಿಗಳು ಇವರಿಗೆ ಉಪನಿರ್ದೇಶಕರು (ಆಡಳಿತ) ಇವರ ಮುಖಾಂತರ
3. ರಾಜ್ಯದ ಸಂಬಂಧಿಸಿದ ಸರ್ಕಾರಿ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಮಾನ್ಯ ಸರ್ಕಾರದ ಅಪರ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ,ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಶಾಲಾಶಿಕ್ಷಣ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು.